FEBRUARY 26, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಪ್ರಸಾರ ಭಾರತಿಯ, ಆಕಾಶವಾಣಿ ಭದ್ರಾವತಿ ಕೇಂದ್ರದ,** 10 ಕಿಲೋ ವ್ಯಾಟ್ ಪ್ರೇಷಕದ, ಉದ್ಘಾಟನಾ ಸಮಾರಂಭ, ಇಂದು ಮಧ್ಯಾಹ್ನ 12.30ಕ್ಕೆ ಶಿವಮೊಗ್ಗದ ವಿದ್ಯಾನಗರದಲ್ಲಿ ನಡೆಯಲಿದೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ, ರಾಜ್ಯ ಖಾತೆ ಸಚಿವ ಎಲ್. ಮುರುಗನ್, ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಪ್ರೇಷಕವನ್ನು ಉದ್ಘಾಟಿಸಲಿದ್ದಾರೆ ಎಂದು, ದಕ್ಷಿಣ ವಲಯದ, ಆಕಾಶವಾಣಿ ಪ್ರಸಾರ ಕಾರ್ಯಾಚರಣೆ, ಅಪರ ಮಹಾ ನಿರ್ದೇಶಕಿ ಗೀತಾ ರಾಣಿ ತಿಳಿಸಿದ್ದಾರೆ. ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಭದ್ರಾವತಿ ಕ್ಷೇತ್ರದ ಶಾಸಕ ಬೇಳೂರು ಗೋಪಾಲಕೃಷ್ಣ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

<><><>

**'ಫಿಟ್ ಇಂಡಿಯಾ; ಖೇಲೋ ಇಂಡಿಯಾ'** ಉಪಕ್ರಮದಡಿ, ಕೇಂದ್ರ ಸರ್ಕಾರ ಆಯೋಜಿಸಿರುವ, ಸಂಸದರ ಕ್ರೀಡಾ ಮಹೋತ್ಸವದ, ಧಾರವಾಡ ಲೋಕಸಭಾ ಕ್ಷೇತ್ರದ, ಅಂತಿಮ ಹಂತದ, ಸಂಸದರ ಟ್ರೋಫಿ ಪಂದ್ಯಾವಳಿ, ಇಂದು ಹಾಗೂ ನಾಳೆ ನಡೆಯಲಿದೆ. ಧಾರವಾಡದ ಕರ್ನಾಟಕ ಮಹಾವಿದ್ಯಾಲಯ, ಕೆ.ಸಿ.ಡಿ. ಕ್ರೀಡಾಂಗಣದಲ್ಲಿ, ಇಂದು ಬೆಳಗ್ಗೆ ಶ್ರೀ ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ಚಾಲನೆ ನೀಡಿದರು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮಹಾಪೌರರಾದ, ಜ್ಯೋತಿ ಪಾಟೀಲ, ಉಪ ಮಹಾಪೌರರಾದ, ಸಂತೋಷ ಚೌವ್ಹಾಣ ಸೇರಿದಂತೆ, ಅನೇಕರು ಪಾಲ್ಗೊಂಡಿದ್ದರು.

<><><>

**ಹೊಸ ದಿಲ್ಲಿಯ, ಜನಪಥ್‌ನ,** ಹ್ಯಾಂಡ್‌ಲೂಮ್ ಹಾಲ್‌ನಲ್ಲಿ ಆಯೋಜಿತ, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ, 43ನೇ ಸಂಸ್ಥಾಪನಾ ದಿನಾಚರಣೆಯಲ್ಲಿ, ಕೇಂದ್ರ ಜವಳಿ ಖಾತೆ ಸಚಿವ, ಗಿರಿರಾಜ್ ಸಿಂಗ್, ಶಿವಮೊಗ್ಗ ಜಿಲ್ಲೆ, ಸಾಗರದ ಹೊನ್ನೇಸರದ ಚರಕ ಸಂಘಕ್ಕೆ, 'ಅತ್ಯುತ್ತಮ ರಾಷ್ಟ್ರೀಯ ಬ್ರ್ಯಾಂಡ್ ನಿರ್ಮಾಣ ಪ್ರಶಸ್ತಿ' ನೀಡಿ, ಗೌರವಿಸಿದರು. ಚರಕ ಸಂಸ್ಥೆ ಸಿ.ಇ.ಓ. ಟೆರೆನ್ಸ್ ಪೀಟರ್, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಪೀಟರ್ ಧ್ವನಿ 18 ಸೆಕೆಂಡುಗಳು**

<><><>

**ಹಿಮೋಫಿಲಿಯಾ, ಕುಸುಮ ರೋಗಿಗಳ ಚಿಕಿತ್ಸೆಗಾಗಿ,** 'ಕುಸುಮ ಸಂಜೀವಿನಿ ಯೋಜನೆ'ಯನ್ನು, ರಾಜ್ಯ ಸರ್ಕಾರ, ದೇಶದಲ್ಲಿಯೇ ಪ್ರಥಮ ಬಾರಿಗೆ, ಜಾರಿಗೊಳಿಸಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಆರೋಗ್ಯ ಮತ್ತು ಕುಟುಂಬ

ಕಲ್ಯಾಣ ಇಲಾಖೆ, ಬೆಂಗಳೂರಿನ ನೆಹರು ತಾರಾಲಯದಲ್ಲಿ ಆಯೋಜಿಸಿದ್ದ, 108 ಆಂಬ್ಯುಲೆನ್ಸ್ ಸೇವೆಗೆ ಚಾಲನೆ ನೀಡಿ, ಮಾತನಾಡಿದರು. ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ ಮಾತನಾಡಿ, ಹಿಮೋಫಿಲಿಯಾ 'ಎ' ವರ್ಗದ ಬಾಧಿತರಿಗೆ, ವಾರ್ಷಿಕ 5 ಲಕ್ಷ ರೂಪಾಯಿ ವೆಚ್ಚವಾಗುವ, 'ಸಬ್ ಕ್ಯುಟೇನಿಯಸ್ ಚುಚ್ಚುಮದ್ದ'ನ್ನು ರಾಜ್ಯ ಸರ್ಕಾರ, ಉಚಿತವಾಗಿ ಒದಗಿಸುತ್ತಿದೆ. 42 ಕೋಟಿ 55 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ, ಎಂದರು.

<><><>

**ಮಕ್ಕಳ ಆರೈಕೆ ರಜೆ, ಸಿ.ಸಿ.ಎಲ್., ಮಗುವಿನ ಹಕ್ಕಾಗಿದ್ದು,** ಉದ್ಯೋಗಿ ತಾಯಿ ಕೋರಿಕೆ ಸಲ್ಲಿಸಿದಾಗ, ಆದ್ಯತೆ ಮೇಲೆ ರಜೆ ಮಂಜೂರು ಮಾಡುವಂತೆ, ಕೇಂದ್ರ ಸರ್ಕಾರಕ್ಕೆ, ರಾಜ್ಯ ಹೈಕೋರ್ಟ್ ಆದೇಶಿಸಿದೆ. ನ್ಯಾಯಮೂರ್ತಿ ಎಸ್.ಜಿ. ಪಂಡಿತ ನೇತೃತ್ವದ ವಿಭಾಗೀಯ ನ್ಯಾಯಪೀಠ, ಮಗುವಿನ ಆರೈಕೆ ರಜೆ ಕೋರಿಕೆಯನ್ನು ನಿರಾಕರಿಸದೇ, ಆದ್ಯತೆಯ ಮೇಲೆ, ಪರಿಗಣಿಸುವಂತೆ ಸೂಚಿಸಿದೆ.

<><><>

**ಕಬ್ಬು ಬೆಳೆಗಾರರಿಗೆ ಘೋಷಿಸಲಾಗಿದ್ದ,** ಆರ್ಥಿಕ ನೆರವಿನ ಮೊತ್ತದಲ್ಲಿ, 300 ಕೋಟಿ ರೂಪಾಯಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಖಾತೆ ಸಚಿವ, ಶಿವಾನಂದ ಪಾಟೀಲ ಮಾಹಿತಿ ನೀಡಿ, ಕಬ್ಬು ಬೆಲೆ ಕುಸಿತದ ಹಿನ್ನೆಲೆ, ಕಳೆದ ನವೆಂಬರ್ ತಿಂಗಳಿನಲ್ಲಿ, ಪ್ರತಿ ಟನ್ ಕಬ್ಬಿಗೆ ಕಾರ್ಖಾನೆಗಳು ಮತ್ತು ರಾಜ್ಯ ಸರ್ಕಾರ, ಹೆಚ್ಚುವರಿಯಾಗಿ 100 ರೂಪಾಯಿ ಆರ್ಥಿಕ ನೆರವು ನೀಡುವುದಾಗಿ, ಪ್ರಕಟಿಸಲಾಗಿತ್ತು, ಎಂದರು.

<><><>

**ಕಲಬುರಗಿ ನಗರ, ಇದೇ ಪ್ರಥಮ** ಬಾರಿಗೆ, ಐ.ಟಿ.ಎಫ್. ಡಬ್ಲ್ಯೂ 35 ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಗೆ, ಸಜ್ಜಾಗಿದೆ. ಮಾರ್ಚ್ 1 ರಿಂದ 8ರ ವರೆಗೆ, ಕಲಬುರಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ, ಪಂದ್ಯಾವಳಿಗಳು ನಡೆಯಲಿವೆ. ಮೊದಲು, 32 ಆಟಗಾರ್ತಿಯರ ಅರ್ಹತಾ ಪಂದ್ಯಾವಳಿ ನಡೆಯಲಿದೆ. ಬಳಿಕ ಸಿಂಗಲ್ಸ್ ಪಂದ್ಯಾವಳಿಯಲ್ಲಿ, 32 ಟೆನಿಸ್ ಪಟುಗಳು ಹಾಗೂ ಡಬಲ್ಸ್ ನಲ್ಲಿ, 16 ತಂಡಗಳು ಸೆಣೆಸಲಿವೆ. ಪಂದ್ಯಗಳು ಮಾರ್ಚ್ 3 ರಿಂದ ಆರಂಭವಾಗಲಿದ್ದು, ಥಾಯ್ಲೆಂಡ್, ನೆದರ್ಲ್ಯಾಂಡ್ ಸೇರಿದಂತೆ, 11 ರಾಷ್ಟ್ರಗಳ ಮಹಿಳಾ ಟೆನಿಸ್ ಪಟುಗಳು ಪಾಲ್ಗೊಳ್ಳುತ್ತಿದ್ದಾರೆ. ಇತ್ತೀಚೆಗೆ, ಬೆಂಗಳೂರು ಐ.ಟಿ.ಎಫ್. ಟೆನಿಸ್‌ನಲ್ಲಿ ರನ್ನರ್ಸ್ ಅಪ್ ಆದ, ವೈಷ್ಣವಿ ಆಡ್ಕರ್ ಸೇರಿದಂತೆ, ಭಾರತದ ಪ್ರಮುಖ ಟೆನಿಸ್ ಆಟಗಾರ್ತಿಯರು, ಭಾಗವಹಿಸಲಿದ್ದಾರೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ,** ರಾಜನಗರದ ಕೆ.ಎಸ್.ಸಿ.ಎ. ಮೈದಾನದಲ್ಲಿ ನಡೆಯುತ್ತಿರುವ, ರಣಜಿ ಟ್ರೋಫಿ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ, ಜಮ್ಮು-ಕಾಶ್ಮೀರ ತಂಡ ಎಲ್ಲ ಹುದ್ದರಿ ಕಳೆದುಕೊಂಡು, 584 ರನ್ ಗಳಿಸಿದೆ. ಜಮ್ಮು-ಕಾಶ್ಮೀರ ತಂಡದ ಎಸ್.ಪುಂದಿರ್ 121 ರನ್ ಗಳಿಸಿದರು. ಕರ್ನಾಟಕ ತಂಡದ ಕೃಷ್ಣ, 98 ರನ್ ನೀಡಿ, 5 ವಿಕೆಟ್ ಪಡೆದರು.

<><><>

**ಬಂಗಾಳಕೊಲ್ಲಿಯಲ್ಲಿ, ವಾಯುಭಾರ ಕುಸಿತದಿಂದಾಗಿ,** ರಾಜ್ಯದ ಹಲವೆಡೆ ಮಳೆಯಾಗಿದೆ. ಕೊಡಗು ಜಿಲ್ಲೆಯ, ವಿವಿಧೆಡೆ ಸುರಿದ ಮಳೆಯಿಂದಾಗಿ, ಒಣಗಿಸಲು ಇಟ್ಟಿದ್ದ ಕಾಫಿ ಬೆಳೆ ಕೊಚ್ಚಿ ಹೋಗಿದೆ. ಮುಂಬರುವ ಮೂರು ದಿನ, ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಗುಡುಗು ಸಹಿತ, ಸಾಮಾನ್ಯ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ, ಮುನ್ಸೂಚನೆ ನೀಡಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**